ಕರ್ನಾಟಕ ಸರ್ಕಾರದ ನಡವಳಿ

ವಿಷಯ: 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grant) ಹಂಚಿಕೆ ಮತ್ತು ಬಳಕೆ ಕುರಿತು ಅನುಮೋದನೆಯಾಗಿರುವ ಎಲ್ಲಾ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯ ಕಲಂ 4(ಜಿ) ರಡಿ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಪತ್ರ ಸಂಖ್ಯೆ: ನಅಇ 294 ಎಂಎನ್‌ಯು 2017, ದಿನಾಂಕ: 24-05-2017.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ/ಪಿಆರ್/6646/2017-18, ದಿನಾಂಕ: 05-01-2018.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ/ಪಿಆರ್/7682/2017-18, ದಿನಾಂಕ: 08-02-2018.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 24-05-2017ರ ಸರ್ಕಾರದ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2017-18ನೇ ಸಾಲಿನ ಆಯವ್ಯಯವನ್ನು ಈ ಕೆಳಕಂಡ ಷರತ್ತುಗಳಿಗೆ ಹೊಂದಾಣಿಕೆ ಮಾಡಿಕೊಂಡು ವ್ಯವಹರಿಸುವಂತೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 170(1)(2) ರನ್ವಯ ಅನುಮೋದನೆಯನ್ನು ನೀಡಲಾಗಿರುತ್ತದೆ.

(1) ಬಿ.ಬಿ.ಎಂ.ಪಿ.ಯ ಆಯವ್ಯಯದಲ್ಲಿನ ಸರ್ಕಾರದ ಅನುದಾನವು, ರಾಜ್ಯದ ಆಯವ್ಯಯದಲ್ಲಿ ಬಿ.ಬಿ.ಎಂ.ಪಿ.ಗೆ ಒದಗಿಸಿರುವ ಅನುದಾನಕ್ಕನುಗುಣವಾಗಿರತಕ್ಕದ್ದು.

(2) ರಾಜ್ಯ ಸರ್ಕಾರದಿಂದ ಒದಗಿಸಲಾದ ಅನುದಾನದಿಂದ ಅನುಮೋದನೆಗೊಂಡ ಕ್ರಿಯಾಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(3) ಆಯವ್ಯಯದಲ್ಲಿ ಜಮೆ ಮತ್ತು ಖರ್ಚುಗಳನ್ನು ಸಮತೋಲನವನ್ನು ಕಾಪಾಡಿಕೊಳ್ಳತಕ್ಕದ್ದು.

2. ಮೇಲೆ (2) ಮತ್ತು (3) ರಲ್ಲಿ ಓದಲಾದ ದಿನಾಂಕ: 05-01-2018 ಮತ್ತು 08-02-2018ರ ಪತ್ರಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಸರ್ಕಾರದ ಆದೇಶ ಸಂಖ್ಯೆ: ನಅಇ 294 ಎಂಎನ್‌ಯು 2017, ದಿನಾಂಕ: 24-05-2017 ರಲ್ಲಿ 2017-18ನೇ ಸಾಲಿನ ಪಾಲಿಕೆಯ ಆಯವ್ಯಯವನ್ನು ಅನುಮೋದಿಸಿದ್ದು, ಈ ಆದೇಶದಲ್ಲಿರುವ ಅನುಬಂಧ-02 ರಲ್ಲಿ 14ನೇ ಹಣಕಾಸು ಆಯೋಗದ ಅನುದಾನವು 09 ಉದ್ದೇಶಗಳಾದ (1) ಕುಡಿಯುವ ನೀರು ಕಾಮಗಾರಿಗಳು. (2) ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸಪ್ಟೇಜ್‌ಗಳ ನಿರ್ವಹಣೆ. (3) ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು. (4) ಘನತ್ಯಾಜ್ಯ ವಸ್ತು ನಿರ್ವಹಣೆ. (5) ಮಳೆ ನೀರು ಚರಂಡಿ ಕಾಮಗಾರಿಗಳು. (6) ಸಮುದಾಯ ಆಟದ ಮೈದಾನ ನಿರ್ವಹಣೆ (ಪಾರ್ಕ್ ಒಳಗೊಂಡಂತೆ). (7) ರಸ್ತೆ ಮತ್ತು

ಬೃಹತ್ ಬೆಂಗಳೂರು ಮಹಾನಗರ ಪಾ
ಜಂಟಿ ಆಯುಕ್ತರು(ಪಶ್ಚಿಮ), ಬೆಂ

ಪಾದಚಾರಿ ಮಾರ್ಗಗಳ ನಿರ್ವಹಣೆ, (8) ವಿದ್ಯುತ್ ಬೀದಿ ದೀಪಗಳ ಅಳವಡಿಕೆ/ನಿರ್ವಹಣೆ/ವಿದ್ಯುತ್ ಉಳಿತಾಯದ ಕ್ರಮಗಳು ಮತ್ತು (9) ಸ್ಮಶಾನ/ಚಿತಾಗಾರ/ಕಚೇರಿಗಳ ನಿರ್ವಹಣೆ ಕಾರ್ಯಗಳಿಗೆ ರೂ.265.30 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.

3. ಅನುಮೋದನೆಯಾಗಿರುವ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವಿಷಯದ ಸಂಖ್ಯೆ: 23(193), ದಿನಾಂಕ: 30-08-2017 ರಲ್ಲಿ ಚರ್ಚಿಸಲಾಗಿದ್ದು, ಈ ವಿಚಾರದಲ್ಲಿ ಸರ್ಕಾರಕ್ಕೆ 2017-18ನೇ ಸಾಲಿನ 14ನೇ ಹಣಕಾಸು ಆಯೋಗದಲ್ಲಿ ಅನುಮೋದನೆಯಾಗಿರುವ ಎಲ್ಲಾ ಉದ್ದೇಶಗಳ ಕಾಮಗಾರಿಗಳಿಗೆ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ಕೆ.ಟಿ.ಪಿ.ಪಿ. ಕಾಯ್ದೆ 4(ಜಿ) ವಿನಾಯಿತಿ ಅಡಿ ಕೈಗೊಳ್ಳಲು ಅಗತ್ಯ ಕ್ರಮವಹಿಸುವುದೆಂದು ತೀರ್ಮಾನಿಸಲಾಗಿರುತ್ತದೆ. 14ನೇ ಹಣಕಾಸು ಆಯೋಗದಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳು ಕೆ.ಟಿ.ಪಿ.ಪಿ. ಕಾಯ್ದೆಯಂತೆ ಟೆಂಡರ್ ಕರೆದು ಪ್ರಾರಂಭಿಸಲು ಹಾಗೂ ಅನುಷ್ಠಾನಗೊಳಿಸಲು ಹೆಚ್ಚಿನ ಕಾಲಾವಧಿ ಅಗತ್ಯವಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ: ನಅಇ 151 ಎಸ್ಎಫ್ಸಿ 2017, ದಿನಾಂಕ: 14-07-2017 ರಲ್ಲಿ, 2016-17ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿರುವ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grant) ಮತ್ತು ಸಾಮಾನ್ಯ ಕಾರ್ಯನಿರ್ವಹಣಾ (General Performance Grants) ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಅತ್ಯಂತ ತುರ್ತು ಹಾಗೂ ಅತೀ ಅವಶ್ಯವೆಂದು ಪಾಲಿಕೆಯಲ್ಲಿ ನಿರ್ಧರಿಸಿ, ಕೆ.ಟಿ.ಪಿ.ಪಿ. ಕಾಯ್ದೆಯಿಂದ ವಿನಾಯಿತಿ ನೀಡಿರುವ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಅನುಷ್ಠಾನಗೊಳಿಸಲು ಅಗತ್ಯ ಕ್ರಮಕೈಗೊಳ್ಳಲು ನಿರ್ದೇಶಿಸಲಾಗಿದೆ. 2017-18ನೇ ಸಾಲಿನ ವರ್ಷವು ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಫೆಬ್ರವರಿ 2018ರ ಮಾಹೆಯಲ್ಲಿ ಕಾಮಗಾರಿಗಳನ್ನು ಆರ್ಥಿಕ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉಳಿದಿರುವ ಕನಿಷ್ಠ ದಿನಗಳಾಗಿದ್ದು ಮತ್ತು ಶೀಘ್ರವಾಗಿ ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ ಕೆ.ಟಿ.ಪಿ.ಪಿ. ಕಾಯ್ದೆ 4(ಜಿ) ವಿನಾಯಿತಿ ಅಡಿ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 23 ಎಂಎನ್ಪೈ 2018,
ಬೆಂಗಳೂರು, ದಿನಾಂಕ: 15-06-2018.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 294 ಎಂಎನ್ಯು 2017, ದಿನಾಂಕ: 24-05-2017 ರಲ್ಲಿ 2017-18ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯಕ್ಕೆ ಅನುಮೋದನೆಯನ್ನು ನೀಡಿದ್ದು, ಆಯವ್ಯಯದಲ್ಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ (General Basic Grant) ಅಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುದಾನದಲ್ಲಿ ರೂ.265.30 (ರೂ.ಇನ್ನೂರ ಅರವತ್ತೈದು ಕೋಟಿ ಮೂವತ್ತು ಲಕ್ಷಗಳು ಮಾತ್ರ) ಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ (ಅನುಬಂಧಲ್ಲಿರುವಂತೆ ಮಾತ್ರ) ಅನುಮೋದನೆಯನ್ನು ನೀಡಿದ್ದು, ಈ ಆದೇಶದೊಂದಿಗೆ ಲಗತ್ತಿಸಿರುವ ರೂ.2[illegible]

ಾಟಗಳ ಮೊತ್ತದವರೆಗಿನ ಕಾಮಗಾರಿಗಳನ್ನು ನೇರವಾಗಿ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ಕೈಗೊಳ್ಳಲು ಸಾಮಾನ್ಯ ವಿನಾಯಿತಿಯನ್ನು ನೀಡಲಾಗಿರುತ್ತದೆ. ಹಾಗೂ ರೂ.2.00 ಕೋಟಿ ಮೀರಿದ ಕಾಮಗಾರಿಗಳನ್ನು ಟೆಂಡರ್ ಮೂಲಕ ಕೈಗೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

1. ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗೊಳಿಸತಕ್ಕದ್ದು. ಬೇರೆಯವರ ಮುಖಾಂತರ ಕೈಗೊಳ್ಳುವಂತಿಲ್ಲ.
2. ಯಾವುದೇ ಕಾಮಗಾರಿಗಳನ್ನು Spilt ಮಾಡಿ ಕೆ.ಆರ್.ಐ.ಡಿ.ಎಲ್.ಗೆ ವಹಿಸಬಾರದು.
3. ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.
4. ಈ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿಗಧಿಪಡಿಸಿರುವ ಸ್ವಂತ ಅನುದಾನದಿಂದ ಭರಿಸುವುದು.
5. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.
6. ಕಾಮಗಾರಿಗಳ ಅಂಶಗಳ ವಿಶಿಷ್ಟ ವಿವರಣೆಯು ಲೋಕೋಪಯೋಗಿ ಇಲಾಖೆಯ ದರಪಟ್ಟಿಯಲ್ಲಿ ಸೂಚಿಸಿರುವಂತೆ ಇರತಕ್ಕದ್ದು.
7. ಸದರಿ ಕಾಮಗಾರಿಗಳನ್ನು ಭಾಗಶ: ಅಥವಾ ಪೂರ್ಣವಾಗಿ ಇತರ ಯಾವುದೇ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿಲ್ಲ ಎಂದು ಧೃಢೀಕರಿಸತಕ್ಕದ್ದು.
8. ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಲ್ಲಿ ಸೇರಿರುವುದಿಲ್ಲ ಎಂದು ಧೃಢೀಕರಿಸತಕ್ಕದ್ದು.
9. ಸದರಿ ಕಾಮಗಾರಿಗಳ ಅನುಷ್ಠಾನದಿಂದ ಇತರ ಯಾವುದೇ ಕಾಮಗಾರಿಯ ಅನುಷ್ಠಾನದಿಂದ ನಿರ್ವಹಣಾ ಅವಧಿ (Maintenance Period) ಅಥವಾ ದೋಷ ಬಾಧ್ಯತಾ ಅವಧಿ (Defects Liability Period) ಯನ್ನು ಉಲ್ಲಂಘಿಸಿಲ್ಲವೆಂದು ಖಾತ್ರಿ ಪಡಿಸಿಕೊಳ್ಳುವುದು.
10. ಸದರಿ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ, ನಂತರದ ಹಾಗೂ ಮಧ್ಯದಲ್ಲಿಯೂ ಸಹ 3 ಹಂತದ ಭಾವಚಿತ್ರಗಳನ್ನು GPS Co-ordinate ಯೊಂದಿಗೆ ಮಾಡಿಕೊಂಡು ಭಾವಚಿತ್ರಗಳನ್ನು ಕಡತದಲ್ಲಿ ನಿರ್ವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಸಂಖ್ಯೆ: ಆಇ 308 ವೆಚ್ಚ-12/2018, ದಿನಾಂಕ: 19-03-2018 ರಂದು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪಿ.ಎನ್. ಪ್ರಭಾಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2. ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
12. ಅಧೀಕ್ಷಕ ಅಭಿಯಂತರರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ನಅಇ 23 ಎಂಎನ್‌ವೈ 2018, ದಿನಾಂಕ: 15–06–2018ಕ್ಕೆ ಅನುಬಂಧ

(ಸರ್ಕಾರದ ಪತ್ರ ಸಂಖ್ಯೆ: ನಅಇ 294 ಎಂಎನ್‌ಯು 2017, ದಿನಾಂಕ: 24–05–2017 ರಂದು ಅನುಮೋದನೆ ನೀಡಿರುವಂತೆ)

Allocation of 14th Finance Commission Grants for 2017-18 – Rs.265.30 Cr

SL	P.Code	Details of works	Amount (Rs.in Lakhs)
1	P3290	PROVIDING STREET LIGHTS AND MAINTENANCE at :	
		BTM Assembly Constituency	350.00
		Ward No 6, 8, 39, 103, 125 Rs 50.00 Lakhs each and Ward No 106 Rs.80.00 Lakhs, Ward No.107 Rs.100.00 Lakhs, Ward No.137 & 164 Rs 75.00 Lakhs each	580.00
		Ward No 7 Rs 20.00 lakhs, ward No.9 & 13 Rs 10.00 lakhs each and Ward Nbo.18 Rs.40.00 lakhs	80.00
		Ward No.32, 58 139, 171 Rs.50.00 lakhs each, ward No.84 Rs.40.00 lakhs	240.00
		Ward No.29	100.00
		Ward No.103	20.00
		Ward No.63 - Rs 115.00 Cr Ward No.177 & 178 Rs.100.00 Cr each	315.00
		Ward Nos. 02, 06, 07, 08, 11, 12, 16, 21, 23, 24, 25, 30, 33, 37, 38, 40, 41, 42, 47, 48, 49, 50, 53, 54, 55, 56, 58, 59, 61, 62, 63, 66, 68, 72, 73, 75, 76, 77, 78, 81, 82, 84, 87, 91, 92, 94, 95, 98, 99, 106, 107, 110, 116, 117, 118, 120, 121, 131, 134, 136, 140, 141, 145, 147, 148, 151, 152, 153, 157, 171, 172, 180, 190, 194, 197,198, 18, 22, 31, 32, 44, 67, 69, 70, 74, 102, 103, 135, 139, 176, 60, 80, 86, 112, 113, 122, 144, Rs.10.00 Lakhs each ward	970.00
		Total Rs.	2655.00
2	P3291	MAINTENANCE OF CREMOTORIUM, BURRIAL GROUNDS & OFFICE MAINTENANCE:	
		BTM Assembly Constituency	175.00
		Ward No. 7 Rs 99.00 Lakhs & Ward No. 195 Rs 191.00 Lakhs	290.00
		Ward No. 7	40.00
		Ward No.141	120.00
		Ward No 29	50.00
		Ward No.103	10.00
		Ward No.62	130.00
		Ward Nos 02, 06, 07, 08, 11, 12, 16, 21, 23, 24, 25, 30, 33, 37, 38, 40, 41, 42, 47, 48, 49, 50, 53, 54, 55, 56, 58, 59, 61, 62, 63, 66, 68, 72, 73, 75, 76, 77, 78, 81, 82, 84, 87, 91, 92, 94, 95, 98, 99, 106, 107, 110, 116, 117, 118, 120, 121, 131, 134, 136, 140, 141, 145, 147, 148, 151, 152, 153, 157, 171, 172, 180, 190, 194, 197,198, 18, 22, 31, 32, 44, 67, 69, 70, 74, 102, 103, 135, 139, 176, 60, 80, 86, 112, 113, 122, 144, Rs.5.00 Lakhs each ward	485.00
		Total Rs.	1300.00
3	P3292	COMMUNITY PROPERTY MAINTENANCE (INCLUDING PARKS):	
		BTM Assembly Constituency	175.00
		Ward No.5 Rs.50.00 Lakhs, ward No.7 Rs.100.00 Lakhs, Ward No.8 Rs.25.00 Lakhs, Ward No.35 Rs.40.00 Lakhs and Ward No.62 & 93 Rs.20.00 Lakhs each and Ward No.164 Rs.35.00 Lakhs	250.00
		Ward No.18	40.00
		Ward No.171	120.00
		Ward No.29	50.00
		Ward No.134	10.00
		Ward No.195	195.00
		Ward Nos 02, 06, 07, 08, 11, 12, 16, 21, 23, 24, 25, 30, 33, 37, 38, 40, 41, 42, 47, 48, 49, 50, 53, 54, 55, 56, 58, 59, 61, 62, 63, 66, 68, 72, 73, 75, 76, 77, 78, 81, 82, 84, 87, 91, 92, 94, 95, 98, 99, 106, 107, 110, 116, 117, 118, 120, 121, 131, 134, 136, 140, 141, 145, 147, 148, 151, 152, 153, 157, 171, 172, 180, 190, 194, 197,198, 18, 22, 31, 32, 44, 67, 69, 70, 74, 102, 103, 135, 139, 176, 60, 80, 86, 112, 113, 122, 144,	485.00

ದಿನಾಂಕ:30-08-2017 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

ವಿಷಯದ ಸಂಖ್ಯೆ:23 (193) 2017-18

ಶ್ರೀ ಮಹಮ್ಮದ್ ರಿಜ್ವಾನ್ ನವಾಬ್, ಅಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"2016-17ನೇ ಸಾಲಿನಲ್ಲಿ 14ನೇ ಹಣಕಾಸಿನ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳೀಗೆ ಸರ್ಕಾರವು ಕೆ.ಆರ್.ಐ.ಡಿ.ಎಲ್. ಮುಖಾಂತರ ಕೈಗೊಳ್ಳಲು ಅನುಮೋದನೆಯನ್ನು ನೀಡಿದ್ದು, 2017-18ನೇ ಸಾಲಿನ 14ನೇ ಹಣಕಾಸಿನ ಅನುದಾನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳೀಗೆ ಸರ್ಕಾರದಿಂದ ಈಗಾಗಲೇ ಅನುಮೋದನೆ ದೊರೆತಿದ್ದು, ಸದರಿ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಗಳಿಗೆ "ಕಾಮಗಾರಿ ಸಂಕೇತಗಳನ್ನು" ನೀಡಿ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕೈಗೊಳ್ಳಲು ಆಯುಕ್ತರು ಅಗತ್ಯ ಕ್ರಮವಹಿಸುವುದು".

ಶ್ರೀ ರಾಜಣ್ಣ ರವರು ಮಹಮ್ಮದ್ ರಿಜ್ವಾನ್ ನವಾಬ್ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "2016-17ನೇ ಸಾಲಿನಲ್ಲಿ 14ನೇ ಹಣಕಾಸಿನ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳೀಗೆ ಸರ್ಕಾರವು ಕೆ.ಆರ್.ಐ.ಡಿ.ಎಲ್. ಮುಖಾಂತರ ಕೈಗೊಳ್ಳಲು ಅನುಮೋದನೆಯನ್ನು ನೀಡಿದ್ದು, 2017-18ನೇ ಸಾಲಿನ 14ನೇ ಹಣಕಾಸಿನ ಅನುದಾನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳೀಗೆ ಸರ್ಕಾರದಿಂದ ಈಗಾಗಲೇ ಅನುಮೋದನೆ ದೊರೆತಿದ್ದು, ಸದರಿ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಗಳಿಗೆ "ಕಾಮಗಾರಿ ಸಂಕೇತಗಳನ್ನು" ನೀಡಿ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕೈಗೊಳ್ಳಲು ಆಯುಕ್ತರು ಅಗತ್ಯ ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು".

(ಜಿ. ಪದ್ಮಾವತಿ)
ಮಹಾಪೌರರು

18

Sl No	Ward No	Name of work	Amount in lakhs
8	35	Providing Cement Concreting to 1st cross MSR Nagara, Aramane Nagara in ward No-35	28.00
9	70	Improvements to roads and drains near Sri Rama Temple surrounding area road in ward No.70, Rajagopalanagara.	49.00
10	70	Improvements to roads and drains to 3rd and 4th cross near Ganesh Temple at Rajagopalanagar in ward No.70, Rajagopalanagara.	49.00
11	70	Improvements to roads and drains to 5th and 6th cross near Ganesh Temple at Rajagopalanagar in ward No.70, Rajagopalanagara.	49.00
12	70	Improvements to roads and drains near Maruthi Theatre Back side road at Rajagopalanagar in ward No.70, Rajagopalanagara.	49.00
13	70	Improvements to roads and drains to surrounding area of 10th and 11th cross at Rajagopalanagar in ward No.70, Rajagopalanagara.	49.00
14	106	Maintenance to drain and footpath in Agrahara Dasarahalli and Rajajinagara Industrial Town & Estate surrounding area in Dr|| Rajkumar ward No-106	99.00
15	130	Improvements drains and footpath and asphalting works in ward No.130, Ullalu.	99.00
		Sub Total	870.00

8. Street light Fixing and Maintenance P 3290

1	6	Providing street light and electrical accessories in ward No.06, Thanisandra.	50.00
2	8	Providing street light and electrical accessories in ward No.08, Kodigehalli	50.00
3	39	Providing additional Street lights in ward No. 39, Chokkasandra.	50.00
4	103	Providing street lights at various locations in ward No.103, Kaveripura.	50.00
5	106	Providing of LED lights at Rajajinagara 6th block and surrounding area in Dr|| Rajkumar ward.	80.00
6	107	Providing LED street lights in Shivanagar ward No.107	50.00
7	107	Providing LED Street lights in 3rd block and 5th block Rajajinagar Shiavanagar ward No.107	50.00
8	164	Improvement street light and energy sever system in ward No.164, Vidyapeetha.	75.00
9	127	Improvement street light and energy sever system in ward No.127, Mudalapalya.	75.00
10	125	Improvement street light and energy sever system in ward No.125, Marenahalli.	50.00
		Sub Total	580.00

9. Crematorium/ Burial Ground maintenance P 3291

1	7	Improvements of burial grounds and crematorium in ward No.07, Byatarayanapura.	99.00
2	198	Improvements of crematorium in ward No.198, Hemmegepura	191.00
		Sub Total	290.00
		Grand Total	5800.00

(9)

..... ಕಡತದ ಸಂಖ್ಯೆ ಪಶ್ಚಿ/ಪ್ರ.ನಾ./ಒತ್ತ.ಬಿಬ್ಬ/17-18

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ದಿನಾಂಕ 30/8/17 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಸಾಮಾನ್ಯ ಸಭೆಯಲ್ಲಿ ಕೈಗೆತ್ತಿಕೊಳ್ಳಲಾದ ವಿಷಯದ ಸಂಖ್ಯೆ 23 (193) /17-18 ಕ್ಕೆ ಮಂಡಿಸಿದ (Suo-motto Resolution) ಠರಾವಿನ ಪ್ರತಿಯನ್ನು ತ್ವರಿತ ಕಾರ್ಯ ನಿರ್ವಹಣೆಗಾಗಿ ಲಗತ್ತಿಸಿದೆ, ಕಛೇರಿ ಟಿಪ್ಪಣಿಗೆ ತೆಗೆದುಕೊಳ್ಳಲು, ಯಾವುದೇ ಕ್ರಮಕೈಗೊಳ್ಳಲು ಹಾಗೂ ಮಾಹಿತಿಗಾಗಿ ಸಲ್ಲಿಸಿದೆ.

ಮಾನ್ಯ ಕಮೀಷನರ್

30/8/17
COUNCIL SECRETARY
Bruhat Bangalore Mahanagara Palike

COMMISSIONER
Bruhat Bengaluru Mahanagara Palike

ದಿನಾಂಕ 12/09/17

ಸಹಾಯಕ ಕಂದಾಯ ಅಧಿಕಾರಿಯವರು
ಚಿಕ್ಕಪೇಟೆ ಉಪವಿಭಾಗ
ಬೆಂಗಳೂರು

3991

Special Commissioner (Projects)
Bruhat Bengaluru Mahanagara Palike

ದಿನಾಂಕ 7/9/17 ರಂದು ಮಾನ್ಯ ಆಯುಕ್ತರು (ಯೋಜನೆ) ರವರ ಕಛೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಖ್ಯೆ: ಪಶ್ಚಿ/ಪ್ರ.ನಾ./ಒತ್ತ.ಬಿಬ್ಬ/17-18 ರಲ್ಲಿ ಸ್ವೀಕೃತವಾಗಿದೆ.

ಸಹಾಯಕ ಕಂದಾಯ ಅಧಿಕಾರಿ

Chief Finance Officer